Re. No. D. 221

सत्यमेव जयते

# भारत का राजपत्र

# The Gazette of India

# ಭಾರತ ರಾಜಪತ್ರ

**( EXTRAORDINARY )**

**( ವಿಶೇಷ ಸಂಚಿಕೆ )**

| | |
|---|---|
| **भाग IX** | **अनुभाग 1** |
| **PART IX** | **SECTION 1** |
| **ಭಾಗ IX** | **ವಿಭಾಗ 1** |

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**


| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**

Legislative Department

New Delhi, 04th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**ವಿಧಾಯೀ ಇಲಾಖೆ**

**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಹಡಗು ಕಟ್ಟೆ ಕೆಲಸಗಾರರ (ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣ) ಅಧಿನಿಯಮ, 1986

## (1986ರ ಅಧಿನಿಯಮ ಸಂಖ್ಯೆ 54)

ಹಡಗುಕಟ್ಟೆ ಕೆಲಸಗಾರರ ಸುರಕ್ಷತೆಗಾಗಿ, ಆರೋಗ್ಯಕ್ಕಾಗಿ ಮತ್ತು ಕಲ್ಯಾಣಕ್ಕಾಗಿ ಹಾಗೂ ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.**- (1) ಈ ಅಧಿನಿಯಮವನ್ನು ಹಡಗು ಕಟ್ಟೆ ಕೆಲಸಗಾರರ (ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(4) ಇದು, ಯಾವುದೇ ರಾಷ್ಟ್ರದ ಯಾವುದೇ ಯುದ್ಧನೌಕೆಗೆ ಅನ್ವಯವಾಗತಕ್ಕದ್ದಲ್ಲ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಮುಚಿತ ಸರ್ಕಾರ" ಎಂದರೆ ಯಾವುದೇ ಪ್ರಮುಖ ಬಂದರಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ಮತ್ತು ಯಾವುದೇ ಇತರ ಬಂದರಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ;

(ಬಿ) "ಸರಕು" ಎಂಬುದರಲ್ಲಿ ಹಡಗಿನಲ್ಲಿ ಅಥವಾ ಇತರ ನೌಕೆಯಲ್ಲಿ ಸಾಗಿಸಿದ ಅಥವಾ ಸಾಗಿಸಲಾಗುವ ಯಾವುದೇ ವಸ್ತುವು ಒಳಗೊಳ್ಳುತ್ತದೆ;

(ಸಿ) "ಮುಖ್ಯ ಪರಿವೀಕ್ಷಕ" ಎಂದರೆ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಹಡಗು ಕಟ್ಟೆ ಸುರಕ್ಷಾ ಮುಖ್ಯ ಪರಿವೀಕ್ಷಕ;

(ಡಿ) "ಹಡಗು ಕಟ್ಟೆ ಕೆಲಸ" ಎಂದರೆ ಹಡಗಿನೊಳಕ್ಕೆ ಅಥವಾ ಇತರ ನೌಕೆಯೊಳಕ್ಕೆ ಸರಕುಗಳನ್ನು ತುಂಬುವುದಕ್ಕೆ ಅಥವಾ ಅದರಿಂದ ಸರಕುಗಳನ್ನು ಇಳಿಸುವುದಕ್ಕೆ, ಸಾಗಿಸುವುದಕ್ಕೆ ಅಥವಾ ದಾಸ್ತಾನು ಮಾಡುವುದಕ್ಕೆ, ಬಂದರಿಗೆ, ಹಡಗು ಕಟ್ಟೆಗೆ, ದಾಸ್ತಾನು ಸ್ಥಳಕ್ಕೆ ಅಥವಾ ಇಳಿದಾಣಕ್ಕೆ ಸಂಬಂಧಿಸಿದಂತೆ ಅಥವಾ ಅದಕ್ಕೆ ಅಗತ್ಯವಾದಂತೆ ಅಥವಾ ಪೂರಕವಾದಂತೆ ಯಾವುದೇ ಬಂದರಿನಲ್ಲಿ ಅಥವಾ ಅದರ ಸುತ್ತಮುತ್ತ ನಡೆಯುವ ಯಾವುದೇ ಕೆಲಸ ಮತ್ತು ಅದು,-

> (i) ಸರಕುಗಳನ್ನು ತುಂಬಲು ಅಥವಾ ಇಳಿಸಲು ಹಡಗುಗಳನ್ನು ಅಥವಾ ಇತರ ನೌಕೆಗಳನ್ನು ಸಿದ್ಧಗೊಳಿಸುವುದಕ್ಕೆ ಅಥವಾ ಅವು ಬಂದರನ್ನು ಬಿಡುವುದಕ್ಕೆ ಸಂಬಂಧಿಸಿದ ಕೆಲಸವು; ಮತ್ತು
>
> (ii) ಹಡಗಿನಲ್ಲಿ ಅಥವಾ ಹಡಗು ಕಟ್ಟೆಗಳಲ್ಲಿ ಇರುವ ಸಾಮಾನು ತುಂಬುವ ಯಾವುದೇ ಸ್ಥಳದ, ತೊಟ್ಟಿಯ, ನಿರ್ಮಿತಿಯ ಅಥವಾ ಎತ್ತುವ ಯಂತ್ರೋಪಕರಣಗಳ ಅಥವಾ ಯಾವುದೇ ಇತರ ದಾಸ್ತಾನು ಪ್ರದೇಶದ ಚಿಪ್ಪಿಂಗ್, ಅದಕ್ಕೆ ಬಣ್ಣ ಬಳಿಯುವುದು ಅಥವಾ ಅದನ್ನು ಸ್ವಚ್ಛಗೊಳಿಸುವುದೂ

- ಒಳಗೊಳ್ಳುತ್ತದೆ.

(ಇ) "ಹಡಗು ಕಟ್ಟೆ ಕೆಲಸಗಾರ" ಎಂದರೆ ಹಡಗು ಕಟ್ಟೆಯ ಕೆಲಸಕ್ಕಾಗಿ ಪರಿಶ್ರಮಧನ ಸಹಿತವಾಗಿ ಅಥವಾ ರಹಿತವಾಗಿ ಪ್ರಧಾನ ನಿಯೋಜಕನ ತಿಳಿವಳಿಕೆಯೊಂದಿಗೆ ಅಥವಾ ಅವನ ತಿಳಿವಳಿಕೆಗೆ ಬಾರದೆ ನೇರವಾಗಿ ಅಥವಾ ಯಾವುದೇ ಏಜೆನ್ಸಿಯಿಂದ ಅಥವಾ ಯಾವುದೇ ಏಜೆನ್ಸಿ ಮೂಲಕ (ಗುತ್ತಿಗೆದಾರನನ್ನು ಒಳಗೊಂಡಂತೆ) ನಿಯೋಜಿತನಾದ ಅಥವಾ ನಿಯೋಜಿತನಾಗುವ ವ್ಯಕ್ತಿ;

(ಎಫ್) ಹಡಗು ಕಟ್ಟೆ ಕೆಲಸಗಾರನಿಗೆ ಸಂಬಂಧಿಸಿದಂತೆ "ನಿಯೋಜಕ" ಎಂದರೆ, ಹಡಗು ಕಟ್ಟೆ ಕೆಲಸಕ್ಕಾಗಿ, ಕೆಲಸಗಾರನು ಪರಿಶ್ರಮಧನ ಸಹಿತವಾಗಿ ಅಥವಾ ರಹಿತವಾಗಿ ಯಾವ ವ್ಯಕ್ತಿಯಿಂದ ನಿಯೋಜಿತನಾಗಿರುವನೋ ಅಥವಾ ನಿಯೋಜಿತನಾಗುವನೋ ಆ ವ್ಯಕ್ತಿ;

(ಜಿ) ಯಾವುದೇ ಏಜೆನ್ಸಿಯಿಂದ ಅಥವಾ ಯಾವುದೇ ಏಜೆನ್ಸಿಯ ಮೂಲಕ (ಗುತ್ತಿಗೆದಾರನು ಒಳಗೊಂಡಂತೆ) ನಿಯೋಜಿತನಾಗಿರುವ ಅಥವಾ ನಿಯೋಜಿತನಾಗುವ ಹಡಗು ಕಟ್ಟೆ ಕೆಲಸಗಾರನ ಸಂಬಂಧದಲ್ಲಿ "ಪ್ರಧಾನ ನಿಯೋಜಕ" ಎಂದರೆ, ಕೆಲಸಗಾರನು ಯಾರ ಕೆಲಸದ ಸಂಬಂಧದಲ್ಲಿ ಅಂಥ ಏಜೆನ್ಸಿಯಿಂದ ನಿಯೋಜಿತನಾಗಿರುವನೋ ಅಥವಾ ನಿಯೋಜಿತನಾಗುವನೋ ಆ ವ್ಯಕ್ತಿ;

---

ದಿನಾಂಕ: 15ನೇ ಏಪ್ರಿಲ್ 1987 ರಂದು ಜಾರಿಗೆ ಬಂದಿದೆ, ದಿನಾಂಕ: 15ನೇ ಏಪ್ರಿಲ್ 1987 ರ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್. 399 (ಇ) ನೋಡಿ. ಭಾರತ ರಾಜಪತ್ರದ ವಿಶೇಷ ಸಂಚಿಕೆಯ ಭಾಗ-II ರ ಪ್ರಕರಣ 3 (i) ನೋಡಿ.

(ಹೆಚ್) "ವಿನಿಯಮ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮ.

**3. ಪರಿವೀಕ್ಷಕರು.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಸಮುಚಿತ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಯನ್ನು ಹಡಗು ಕಟ್ಟೆ ಸುರಕ್ಷಾ ಮುಖ್ಯ ಪರಿವೀಕ್ಷಕನಾಗಿ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ಮುಖ್ಯ ಪರಿವೀಕ್ಷಕನಿಗೆ ಅಧೀನರಾದ ಪರಿವೀಕ್ಷಕರನ್ನಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬಂದರುಗಳಲ್ಲಿ ನೇಮಕ ಮಾಡಬಹುದು.

(2) ಮುಖ್ಯ ಪರಿವೀಕ್ಷಕನು ಪರಿವೀಕ್ಷಕನ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು.

(3) ಮುಖ್ಯ ಪರಿವೀಕ್ಷಕನನ್ನು ಮತ್ತು ಎಲ್ಲಾ ಪರಿವೀಕ್ಷಕರನ್ನು ಭಾರತ ದಂಡ ಸಂಹಿತೆಯ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**4. ಪರಿವೀಕ್ಷಕರ ಅಧಿಕಾರಗಳು.–** ಪರಿವೀಕ್ಷಕನು ತಾನು ಯಾವ ಬಂದರಿನಲ್ಲಿ ನೇಮಕಗೊಂಡಿರುವನೋ ಆ ಯಾವುದೇ ಬಂದರಿನಲ್ಲಿ,–

(ಎ) ತಾನು ಸೂಕ್ತವೆಂದು ಭಾವಿಸುವಂಥ ನೆರವು ಏನಾದರೂ ಬೇಕಾಗಿದ್ದರೆ ಆ ನೆರವಿನೊಂದಿಗೆ ಯಾವುದೇ ಹಡಗಿಗೆ, ಹಡಗು ಕಟ್ಟೆಗೆ, ಉಗ್ರಾಣಕ್ಕೆ ಅಥವಾ ಎಲ್ಲಿ ಯಾವುದೇ ಹಡಗು ಕಟ್ಟೆ ಕೆಲಸ ನಡೆಯುತ್ತಿದೆಯೋ ಅಥವಾ ಯಾವುದೇ ಹಡುಗು ಕಟ್ಟೆ ಕೆಲಸ ನಡೆಯುತ್ತಿದೆ ಎಂದು ನಂಬಲು ಅವನಿಗೆ ಕಾರಣವಿದೆಯೋ ಆ ಇತರ ಆವರಣಗಳಿಗೆ ಪ್ರವೇಶಿಸಬಹುದು;

(ಬಿ) ಹಡಗನ್ನು, ಹಡಗು ಕಟ್ಟೆಯನ್ನು, ಎತ್ತುವ ಯಂತ್ರೋಪಕರಣಗಳನ್ನು, ಸರಕು ನಿರ್ವಹಣಾ ಸಲಕರಣೆಗಳನ್ನು, ಸಾರುವೆಗಳನ್ನು, ಸಾಗಣೆ ಸಾಧನ ಸಲಕರಣೆಗಳನ್ನು, ಉಗ್ರಾಣಗಳನ್ನು ಅಥವಾ ಯಾವುದೇ ಹಡಗು ಕಟ್ಟೆ ಕೆಲಸಕ್ಕಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲಾಗುವ ಇತರ ಆವರಣಗಳನ್ನು ಪರೀಕ್ಷಿಸಬಹುದು;

(ಸಿ) ಹಡಗು ಕಟ್ಟೆ ಕೆಲಸಗಾರರ ನಿಯೋಜನೆಗೆ ಸಂಬಂಧಪಟ್ಟ ಯಾವುದೇ ರಿಜಿಸ್ಟರನ್ನು, ಹಾಜರಿಪಟ್ಟಿಯನ್ನು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ದಸ್ತಾವೇಜನ್ನು ಪರೀಕ್ಷಿಸಬಹುದು;

(ಡಿ) ಯಾವ ವ್ಯಕ್ತಿಯ ಸಾಕ್ಷ್ಯವು ಅವಶ್ಯವೆಂದು ತಾನು ಭಾವಿಸುತ್ತಾನೋ ಆ ಯಾರೇ ವ್ಯಕ್ತಿಯಿಂದ, ಅಂಥ ಸಾಕ್ಷ್ಯವನ್ನು ಆ ಸ್ಥಳದಲ್ಲಿಯೇ ಅಥವಾ ಅನ್ಯಥಾ ಪಡೆಯಬಹುದು:

ಪರಂತು, ಯಾರೇ ವ್ಯಕ್ತಿಯನ್ನು, ಅವನನ್ನು ಅಪರಾಧದಲ್ಲಿ ಸಿಕ್ಕಿಸುವಂಥ ಯಾವುದೇ ಪ್ರಶ್ನೆಗೆ ಉತ್ತರಿಸುವಂತೆ ಅಥವಾ ಯಾವುದೇ ಸಾಕ್ಷ್ಯವನ್ನು ನೀಡುವಂತೆ ಈ ಪ್ರಕರಣದ ಮೇರೆಗೆ ಒತ್ತಾಯಪಡಿಸತಕ್ಕದ್ದಲ್ಲ;

(ಇ) ಯಾವ ಅಪರಾಧವನ್ನು ಮಾಡಲಾಗಿದೆಯೆಂದು ನಂಬಲು ಅವನಿಗೆ ಕಾರಣವಿದೆಯೋ ಆ ಯಾವುದೇ ಅಪರಾಧದ ಸಂಬಂಧದಲ್ಲಿ ಅಥವಾ ಯಾವುದೇ ವಿಚಾರಣೆಯ ಉದ್ದೇಶಕ್ಕಾಗಿ ಅವನು ಸುಸಂಬದ್ಧವೆಂದು ಪರಿಗಣಿಸಬಹುದಾಂಥ ರಿಜಿಸ್ಟರುಗಳ, ದಾಖಲೆಗಳ ಅಥವಾ ಇತರ ದಸ್ತಾವೇಜುಗಳ ಅಥವಾ ಅವುಗಳ ಭಾಗಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು;

(ಎಫ್) ಯಾವುದೇ ಪರೀಕ್ಷೆಯ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಅವನು ಅವಶ್ಯವೆಂದು ಪರಿಗಣಿಸುವಂಥ ಛಾಯಾಚಿತ್ರವನ್ನು, ಕಚ್ಚಾ ನಕಾಶೆಯನ್ನು, ಮಾದರಿಯನ್ನು, ಅಳತೆಯನ್ನು ಅಥವಾ ದಾಖಲೆಯನ್ನು ತೆಗೆದುಕೊಳ್ಳಬಹುದು;

(ಜಿ) ಯಾವ ಅಪಘಾತದ ಪರಿಣಾಮವಾಗಿ ಎತ್ತುವ ಯಂತ್ರೋಪಕರಣ, ಸಾಗಣೆ ಸಾಧನ ಸಲಕರಣೆಗಳು, ಸಾರುವೆಯು ಕುಸಿದಿದೆಯೆಂದು ಅಥವಾ ವಿಫಲಗೊಂಡಿದೆ ಎಂದು ನಂಬಲು ಅವನಿಗೆ ಕಾರಣವಿದೆಯೋ ಆ ಯಾವುದೇ ಅಪಘಾತದ ಕಾರಣಗಳ ಬಗ್ಗೆ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ವಿನಿಯಮಗಳನ್ನು ಪಾಲಿಸದಿರುವ ಬಗ್ಗೆ ವಿಚಾರಣೆಯನ್ನು ನಡೆಸಬಹುದು;

(ಹೆಚ್) ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗೆ ಉದ್ಭವಿಸುವ ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಕಾರಣ ತೋರಿಸುವಂತೆ ನೋಟೀಸನ್ನು ನೀಡಬಹುದು;

(ಐ) ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗೆ ಉದ್ಭವಿಸುವ ಯಾವುದೇ ದೂರನ್ನು ಅಥವಾ ಇತರ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಟ್ ಮಾಡಬಹುದು, ನಡೆಸಬಹುದು ಅಥವಾ ಪ್ರತಿರಕ್ಷಿಸಿಕೊಳ್ಳಬಹುದು;

(ಜೆ) ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

**5. ಹಡಗು ಕಟ್ಟೆ ಕೆಲಸಗಾರರ ನಿಯೋಜನೆಯು ಅಪಾಯಕಾರಿಯಾಗಿದ್ದರೆ ಪರಿವೀಕ್ಷಕನ ಅಧಿಕಾರಗಳು.–** (1) ಯಾವ ಸ್ಥಳದಲ್ಲಿ, ಯಾವುದೇ ಹಡಗು ಕಟ್ಟೆ ಕೆಲಸ ನಡೆಯುತ್ತಿದೆಯೋ ಆ ಯಾವುದೇ ಸ್ಥಳದಲ್ಲಿ, ಹಡಗು ಕಟ್ಟೆ ಕೆಲಸಗಾರರ ಜೀವಕ್ಕೆ, ಸುರಕ್ಷತೆಗೆ ಅಥವಾ ಆರೋಗ್ಯಕ್ಕೆ ಅಪಾಯಕರವಾದಂಥ ಪರಿಸ್ಥಿತಿಯಿದೆಯೆಂದು ಪರಿವೀಕ್ಷಕನಿಗೆ ಕಂಡು ಬಂದರೆ, ಅವನು ತನಗೆ ಸಮಾಧಾನವಾಗುವ ರೀತಿಯಲ್ಲಿ ನಿವಾರಿಸಲು ಕ್ರಮಗಳನ್ನು ಕೈಗೊಳ್ಳುವವರೆಗೆ, ಅಂಥ ಸ್ಥಳದಲ್ಲಿ ಯಾವುದೇ ಹಡಗು ಕಟ್ಟೆ ಕೆಲಸವನ್ನು ನಿಷೇಧಿಸಿರುವ ಲಿಖಿತ ಆದೇಶವನ್ನು ಅಂಥ ಸ್ಥಳದ ಮಾಲೀಕನಿಗೆ ಅಥವಾ ಆ ಸ್ಥಳದ ಪ್ರಭಾರ ಹೊಂದಿರುವ ವ್ಯಕ್ತಿಗೆ ಜಾರಿಮಾಡಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಆದೇಶವನ್ನು ಜಾರಿ ಮಾಡುವ ಪರಿವೀಕ್ಷಕನು, ಅದರ ಒಂದು ಪ್ರತಿಯನ್ನು ಹಿಂಬರಹದೊಂದಿಗೆ ಮುಖ್ಯ ಪರಿವೀಕ್ಷಕನಿಗೆ ಕಳುಹಿಸತಕ್ಕದ್ದು, ಅವನು ಆ ಬಗ್ಗೆ ಅಪೀಲಿಗೆ ಕಾಯದೆ ಆ ಆದೇಶವನ್ನು ಮಾರ್ಪಾಟುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

**6. ಪರಿವೀಕ್ಷಕನಿಗೆ ಒದಗಿಸಬೇಕಾದ ಸೌಲಭ್ಯಗಳು.–** ಯಾವ ಸ್ಥಳದಲ್ಲಿ, ಯಾವುದೇ ಹಡಗು ಕಟ್ಟೆ ಕೆಲಸ ನಡೆಯುತ್ತಿದೆಯೋ ಆ ಸ್ಥಳದ ಮಾಲೀಕನು ಅಥವಾ ಆ ಸ್ಥಳದ ಪ್ರಭಾರ ಹೊಂದಿರುವ ವ್ಯಕ್ತಿಯು, ಮುಖ್ಯ ಪರಿವೀಕ್ಷಕನಿಗೆ ಅಥವಾ ಪರಿವೀಕ್ಷಕನಿಗೆ ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗೆ ಆ ಸ್ಥಳವನ್ನು ಪ್ರವೇಶ ಮಾಡುವುದಕ್ಕೆ, ಪರಿವೀಕ್ಷಣೆ ಮಾಡುವುದಕ್ಕೆ, ಸಮೀಕ್ಷೆ ಮಾಡುವುದಕ್ಕೆ, ಅಳತೆ ಮಾಡುವುದಕ್ಕೆ, ಪರೀಕ್ಷೆ ಮಾಡುವುದಕ್ಕೆ ಅಥವಾ ವಿಚಾರಣೆ ಮಾಡುವುದಕ್ಕೆ ಎಲ್ಲ ಸೂಕ್ತ ಸೌಲಭ್ಯಗಳನ್ನು ಒದಗಿಸತಕ್ಕದ್ದು.

**7. ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ನಿರ್ಬಂಧಗಳು.–** (1) ಈ ಅಧಿನಿಯಮದ ಅಥವಾ ವಿನಿಯಮಗಳ ಉದ್ದೇಶಗಳಿಗಾಗಿ ಪರಿವೀಕ್ಷಣೆಯನ್ನು ಅಥವಾ ತನಿಖೆಯನ್ನು ನಡೆಸುವ ಕಾಲದಲ್ಲಿ ಮುಖ್ಯ ಪರಿವೀಕ್ಷಕನಿಗೆ ಅಥವಾ ಪರಿವೀಕ್ಷನಿಗೆ ಅಥವಾ ಅವನಿಗೆ ಸಹಾಯಕವಾದ ಯಾರೇ ವ್ಯಕ್ತಿಗೆ ಬೇಕಾಗುವಂಥ ಯಾವುದೇ ಹಡಗು ಕಟ್ಟೆಯ ಕೆಲಸಕ್ಕೆ ಸಂಬಂಧಪಟ್ಟ ರಿಜಿಸ್ಟರುಗಳ ಅಥವಾ ಇತರ ದಾಖಲೆಗಳ ಎಲ್ಲ ಪ್ರತಿಗಳನ್ನು ಮತ್ತು ಅವುಗಳಿಂದ ಪಡೆದ ಉದ್ಧೃತ ಭಾಗಗಳನ್ನು ಮತ್ತು ಎಲ್ಲ ಇತರ ಮಾಹಿತಿಯನ್ನು, ರಹಸ್ಯವೆಂದು ಪರಿಗಣಿಸತಕ್ಕದ್ದು ಮತ್ತು ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಯಾವುದೇ ಕ್ರಮದ ಅಥವಾ ವ್ಯವಹರಣೆಯ ಉದ್ದೇಶಕ್ಕಾಗಿ ಬಹಿರಂಗಪಡಿಸಬೇಕಾಗಿದ್ದ ಹೊರತು ಅಥವಾ ಯಾವುದೇ ಹಡಗು ಕಟ್ಟೆ ಕೆಲಸಗಾರರ ಆರೋಗ್ಯ, ಸುರಕ್ಷತೆ ಅಥವಾ ಕಲ್ಯಾಣವನ್ನು ಸುನಿಶ್ಚಿತಪಡಿಸುವುದಕ್ಕಾಗಿ ಹಾಗೆ ಬಹಿರಂಪಡಿಸುವುದು ಅವಶ್ಯಕವೆಂದು ಮುಖ್ಯ ಪರಿವೀಕ್ಷಕನು ಅಥವಾ ಪರಿವೀಕ್ಷಕನು ಪರಿಗಣಿಸಿದ ಹೊರತು, ಯಾರೇ ವ್ಯಕ್ತಿಗೆ ಅಥವಾ ಪ್ರಾಧಿಕಾರಿಗೆ ಅದನ್ನು ಬಹಿರಂಗಪಡಿಸತಕ್ಕದ್ದಲ್ಲ.

(2) ಮುಖ್ಯ ಪರಿವೀಕ್ಷಕನು ಅಥವಾ ಪರಿವೀಕ್ಷಕನು ಯಾವುದೇ ಕಾನೂನು ಉಪಬಂಧಗಳ ನ್ಯೂನತೆಯನ್ನು ಅಥವಾ ಉಲ್ಲಂಘನೆಯನ್ನು ತನ್ನ ಗಮನಕ್ಕೆ ತರುವಂಥ ಯಾವುದೇ ದೂರಿನ ಮೂಲವನ್ನು ಬಹಿರಂಗಪಡಿಸತಕ್ಕದ್ದಲ್ಲ ಮತ್ತು ಅಂಥ ದೂರಿಗೆ ಸಂಬಂಧಪಟ್ಟಂತೆ ಯಾವುದೇ ಭೇಟಿ ನೀಡಬೇಕಾಗಿದ್ದರೆ ಅಥವಾ ಯಾವುದೇ ಪರಿವೀಕ್ಷಣೆಯನ್ನು ಮಾಡಬೇಕಾಗಿದ್ದರೆ, ಅವನು ಅಂಥ ದೂರನ್ನು ಸ್ವೀಕರಿಸಿದ ಪರಿಣಾಮವಾಗಿ ಭೇಟಿ ನೀಡಲಾಗುತ್ತದೆಯೆಂಬ ಬಗ್ಗೆ ನಿಯೋಜಕನಿಗೆ ಯಾವುದೇ ಮಾಹಿತಿಯನ್ನು ನೀಡತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಮೇರೆಗೆ ವಿಧಿಸಿರುವ ನಿರ್ಬಂಧಗಳು, ಯಾವ ಪ್ರಕರಣದಲ್ಲಿ ಫಿರ್ಯಾದುದಾರನು ತಾನೇ ಸ್ವತಃ ದೂರಿನ ಮೂಲವನ್ನು ಬಹಿರಂಗಗೊಳಿಸುವುದಕ್ಕೆ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿರುವನೋ ಆ ಯಾವುದೇ ಪ್ರಕರಣಕ್ಕೆ ಅನ್ವಯವಾಗತಕ್ಕದ್ದಲ್ಲ.

(3) ಮುಖ್ಯ ಪರಿವೀಕ್ಷಕನು ಅಥವಾ ಪರಿವೀಕ್ಷಕನು ಅಥವಾ ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಇತರ ಯಾರೇ ವ್ಯಕ್ತಿಯು ಮೇಲೆ ಹೇಳಿದಂತಹ ಯಾವುದೇ ಮಾಹಿತಿಯನ್ನು ಈ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಬಹಿರಂಗಪಡಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**8. ಅಪೀಲು.–** 5ನೇ ಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅವನಿಗೆ ಆ ಆದೇಶವನ್ನು ಯಾವ ದಿನಾಂಕದಂದು ತಲುಪಿಸಲಾಯಿತೋ ಆ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ, ಮುಖ್ಯ ಪರಿವೀಕ್ಷಕನಿಗೆ ಅಥವಾ ಅಂಥ ಆದೇಶವನ್ನು ಮುಖ್ಯ ಪರಿವೀಕ್ಷಕನೇ ಮಾಡಿರುವಲ್ಲಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಅಪೀಲನ್ನು ಸಲ್ಲಿಸಬಹುದು ಮತ್ತು ಮುಖ್ಯ ಪರಿವೀಕ್ಷಕನು ಅಥವಾ ಅಂಥ ಪ್ರಾಧಿಕಾರಿಯು ಅಪೀಲುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಸಾಧ್ಯವಾದಷ್ಟು ತ್ವರಿತವಾಗಿ ಅಪೀಲನ್ನು ವಿಲೆ ಮಾಡತಕ್ಕದ್ದು:

ಪರಂತು, ಸಾಕಷ್ಟು ಕಾರಣಗಳಿಂದಾಗಿ ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಮುಖ್ಯ ಪರಿವೀಕ್ಷಕನಿಗೆ ಅಥವಾ ಅಂಥ ಪ್ರಾಧಿಕಾರಿಗೆ ಮನವರಿಕೆಯಾದರೆ ಅಪೀಲನ್ನು ಸಲ್ಲಿಸಲು ಇದ್ದ ಸದರಿ ಹದಿನೈದು ದಿನಗಳ ಅವಧಿಯ ಮುಕ್ತಾಯದ ತರುವಾಯವೂ ಅಪೀಲನ್ನು ಮುಖ್ಯ ಪರಿವೀಕ್ಷಕನು ಅಥವಾ ಪ್ರಾಧಿಕಾರಿಯು ಪುರಸ್ಕರಿಸಬಹುದು:

ಮತ್ತು ಪರಂತು, ಮುಖ್ಯ ಪರಿವೀಕ್ಷಕನು ಅಥವಾ ಅಂಥ ಪ್ರಾಧಿಕಾರಿಯು ತೀರ್ಮಾನಿಸುವವರೆಗೆ 5ನೇ ಪ್ರಕರಣದ ಮೇರೆಗಿನ ಆದೇಶವನ್ನು ಪಾಲಿಸತಕ್ಕದ್ದು.

**9. ಸಲಹಾ ಸಮಿತಿ.–** (1) ಸಮುಚಿತ ಸರ್ಕಾರವು, ಈ ಅಧಿನಿಯಮವನ್ನು ಮತ್ತು ವಿನಿಯಮಗಳನ್ನು ಜಾರಿಗೆ ತರುವಲ್ಲಿ ಉದ್ಭವಿಸುವಂಥ ಹಾಗೂ ಆ ಸರ್ಕಾರವು ಸಲಹೆಗಾಗಿ ಸಮಿತಿಗೆ ಒಪ್ಪಿಸುವಂಥ ವಿಷಯಗಳ ಬಗ್ಗೆ ಸಲಹೆ ನೀಡಲು ಸಲಹಾ ಸಮಿತಿಯೊಂದನ್ನು ರಚಿಸಬಹುದು.

(2) ಸಲಹಾ ಸಮಿತಿಯ ಸದಸ್ಯರನ್ನು ಸಮುಚಿತ ಸರ್ಕಾರವು ನೇಮಕ ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಷ್ಟು ಸದಸ್ಯರು ಇರತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅವರನ್ನು ಆಯ್ಕೆ ಮಾಡತಕ್ಕದ್ದು:

ಪರಂತು, ಸಲಹಾ ಸಮಿತಿಯು,–

(i) ಸಮುಚಿತ ಸರ್ಕಾರವನ್ನು,

(ii) ಹಡಗು ಕಟ್ಟೆ ಕೆಲಸಗಾರರನ್ನು, ಮತ್ತು

(iii) ಹಡಗು ಕಟ್ಟೆ ಕೆಲಸಗಾರರ ಮತ್ತು ಹಡಗು ಕಂಪನಿಗಳ ನಿಯೋಜಕರನ್ನು

– ಸಮಾನ ಸಂಖ್ಯೆಯಲ್ಲಿ ಪ್ರತಿನಿಧಿಸುವ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಸಲಹಾ ಸಮಿತಿಯ ಅಧ್ಯಕ್ಷನು, ಸಮುಚಿತ ಸರ್ಕಾರವನ್ನು ಪ್ರತಿನಿಧಿಸಲು ನೇಮಕಗೊಂಡ ಸದಸ್ಯರಲ್ಲಿ ಒಬ್ಬನಾಗಿರತಕ್ಕದ್ದು, ಅವನನ್ನು ಈ ಬಗ್ಗೆ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು.

(4) ಸಮುಚಿತ ಸರ್ಕಾರವು ಸಲಹಾ ಸಮಿತಿಯ ಎಲ್ಲ ಸದಸ್ಯರ ಹೆಸರುಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(5) ಸಲಹಾ ಸಮಿತಿಯ ಸದಸ್ಯರ ಪದಾವಧಿಯು ಮತ್ತು ಅವರಲ್ಲಿ ಉಂಟಾಗುವ ಖಾಲಿಸ್ಥಾನಗಳನ್ನು ತುಂಬುವ ರೀತಿಯು ಮತ್ತು ಸದಸ್ಯರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

**10. ಅಪಘಾತಗಳ ಅಥವಾ ರೋಗಗಳ ಪ್ರಕರಣಗಳ ಬಗ್ಗೆ ವಿಚಾರಣೆಗೆ ನಿರ್ದೇಶನ ನೀಡಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಯಾವುದೇ ಹಡಗು ಕಟ್ಟೆ ಕೆಲಸಕ್ಕೆ ಸಂಬಂಧಪಟ್ಟಂತೆ ಸಂಭವಿಸುವ ಯಾವುದೇ ಅಪಘಾತದ ಕಾರಣಗಳ ಬಗ್ಗೆ ಅಥವಾ ಯಾವ ರೋಗವನ್ನು ಹಡಗು ಕಟ್ಟೆ ಕೆಲಸಕ್ಕೆ ಸಂಬಂಧಪಟ್ಟ ರೋಗವೆಂದು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾಗಿದೆಯೋ ಆ ಯಾವುದೇ ರೋಗವು ಹಡಗು ಕಟ್ಟೆ ಕೆಲಸಗಾರರಿಗೆ ತಗಲಿದೆಯೆಂದು ಅಥವಾ ತಗಲಲಿದೆಯೆಂದು ಶಂಕಿಸಿರುವ ಯಾವುದೇ ಪ್ರಕರಣಗಳ ಬಗ್ಗೆ ವಿಚಾರಣೆಯನ್ನು ನಡೆಸಲು ಸಕ್ಷಮ ವ್ಯಕ್ತಿಯನ್ನು ನೇಮಿಸುವುದು ವಿಹಿತವೆಂದು ಪರಿಗಣಿಸಿದರೆ ಅದು ಹಾಗೆ ಮಾಡಬಹುದು ಮತ್ತು ಅಂಥ ವಿಚಾರಣೆಯಲ್ಲಿ ನ್ಯಾಯ ನಿರ್ಧಾರಕರಾಗಿ ಕೆಲಸ ಮಾಡಲು ಕಾನೂನು ಅಥವಾ ವಿಶೇಷ ಜ್ಞಾನವನ್ನು ಹೊಂದಿರುವ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ಸಹ ನೇಮಕ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಲು ನೇಮಕಗೊಂಡ ವ್ಯಕ್ತಿಯು, ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಿಸುವ ಮತ್ತು ದಸ್ತಾವೇಜುಗಳನ್ನು ಮತ್ತು ಮುದ್ದೆ ಮಾಲುಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸುವ ಉದ್ದೇಶಗಳಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ (1908ರ 5)ಯ ಮೇರೆಗೆ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಆ ವಿಚಾರಣೆಯ ಉದ್ದೇಶಗಳಿಗಾಗಿ ಅವಶ್ಯಕವಾಗಬಹುದಾದಷ್ಟರಮಟ್ಟಿಗೆ ಈ ಅಧಿನಿಯಮದ ಮೇರೆಗೆ ಪರಿವೀಕ್ಷಕನ ಅಧಿಕಾರಗಳಲ್ಲಿ ಯಾವುದೇ ಅಧಿಕಾರವನ್ನು ಸಹ ಚಲಾಯಿಸಬಹುದು ಮತ್ತು ಯಾವುದೇ ಮಾಹಿತಿಯನ್ನು ಒದಗಿಸುವಂತೆ ವಿಚಾರಣೆಯನ್ನು ನಡೆಸುತ್ತಿರುವ ವ್ಯಕ್ತಿಯು ಯಾವ ವ್ಯಕ್ತಿಗೆ ಅಗತ್ಯಪಡಿಸುವನೋ ಆ ಪ್ರತಿಯೊಬ್ಬ ವ್ಯಕ್ತಿಯು, ಭಾರತ ದಂಡ ಸಂಹಿತೆಯ 176ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಾಗೆ ಮಾಡಲು ಕಾನೂನು ರೀತ್ಯಾ ಬದ್ಧನಾಗಿದ್ದಾನೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುತ್ತಿರುವ ವ್ಯಕ್ತಿಯು, ಅಪಘಾತಕ್ಕೆ ಅಥವಾ ಸಂದರ್ಭಾನುಸಾರ, ರೋಗಕ್ಕೆ ಕಾರಣಗಳನ್ನು ಮತ್ತು ಯಾವುದೇ ಸಂಬಂಧಿತ ಪರಿಸ್ಥಿತಿಗಳನ್ನು ನಿರೂಪಿಸಿ ಮತ್ತು ತಾನು ಅಥವಾ ನ್ಯಾಯ ನಿರ್ಧಾರಕರಲ್ಲಿ ಯಾರೇ ಒಬ್ಬನು ಸೂಕ್ತವೆಂದು ಭಾವಿಸಬಹುದಾದ ಯಾವುದೇ ಅಭಿಪ್ರಾಯಗಳನ್ನು ಸೇರಿಸಿ ಸಮುಚಿತ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

(4) ಈ ಪ್ರಕರಣದ ಮೇರೆಗಿನ ವಿಚಾರಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು, ಸಮುಚಿತ ಸರ್ಕಾರವು 20ನೇ ಪ್ರಕರಣದ ಮೇರೆಗೆ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

**11. ಹಡಗು ಕಟ್ಟೆ ಕೆಲಸಗಾರರ ಬಾಧ್ಯತೆಗಳು.–** (1) ಯಾರೇ ಹಡಗು ಕಟ್ಟೆ ಕೆಲಸಗಾರನು,–

(ಎ) ಹಡಗು ಕಟ್ಟೆ ಕೆಲಸಗಾರರ ಆರೋಗ್ಯಕ್ಕೆ, ಸುರಕ್ಷತೆಗೆ ಮತ್ತು ಕಲ್ಯಾಣಕ್ಕೆ ಭದ್ರತೆಯೊದಗಿಸುವ ಉದ್ದೇಶಕ್ಕಾಗಿ ಯಾವುದೇ ಹಡಗು ಕಟ್ಟೆ ಕೆಲಸಕ್ಕೆ ಸಂಬಂಧಿಸಿದಂತೆ ಒದಗಿಸಿರುವ ಯಾವುದೇ ಸಾಧನ ಸಾಮಗ್ರಿಯ ಸಲಕರಣೆಯ ಅಥವಾ ಇತರ ವಸ್ತುವಿನ ಬಗ್ಗೆ ಉದ್ದೇಶಪೂರ್ವಕವಾಗಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಅಥವಾ ಅದನ್ನು ದುರುಪಯೋಗಪಡಿಸಿಕೊಳ್ಳತಕ್ಕದ್ದಲ್ಲ;

(ಬಿ) ತನಗಾಗಲಿ ಅಥವಾ ಇತರರಿಗಾಗಲಿ ಅಪಾಯವುಂಟು ಮಾಡುವ ಸಂಭವವಿರುವ ಯಾವುದೇ ಕಾರ್ಯವನ್ನು ಉದ್ದೇಶಪೂರ್ವಕವಾಗಿ ಮತ್ತು ಸಕಾರಣವಿಲ್ಲದೆ ಮಾಡತಕ್ಕದ್ದಲ್ಲ; ಮತ್ತು

(ಸಿ) ಹಡಗು ಕಟ್ಟೆ ಕೆಲಸಗಾರರ ಆರೋಗ್ಯಕ್ಕೆ, ಸುರಕ್ಷತೆಗೆ ಮತ್ತು ಕಲ್ಯಾಣಕ್ಕೆ ಭದ್ರತೆಯೊದಗಿಸುವ ಉದ್ದೇಶಕ್ಕಾಗಿ ಯಾವುದೇ ಹಡಗು ಕಟ್ಟೆ ಕೆಲಸಕ್ಕೆ ಸಂಬಂಧಿಸಿದಂತೆ ಒದಗಿಸಿರುವ ಯಾವುದೇ ಸಾಧನ ಸಾಮಗ್ರಿಯನ್ನು, ಸಲಕರಣೆಗಳನ್ನು ಅಥವಾ ಇತರ ವಸ್ತುವನ್ನು ಬಳಸುವುದನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸತಕ್ಕದ್ದಲ್ಲ;

(2) ಯಾರೇ ಹಡಗು ಕಟ್ಟೆ ಕೆಲಸಗಾರನು 1ನೇ ಉಪ-ಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**12. ವಿನಾಯಿತಿಗೊಳಿಸಲು ಅಧಿಕಾರ.**- ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸೂಕ್ತವೆಂದು ತಾನು ಭಾವಿಸುವಂಥ ಷರತ್ತುಗಳೇನಾದರೂ ಇದ್ದರೆ, ಅವುಗಳಿಗೊಳಪಟ್ಟು,-

(ಎ) ಯಾವುದೇ ಬಂದರಿನಲ್ಲಿ ಅಥವಾ ಸ್ಥಳದಲ್ಲಿ, ಹಡಗು ಕಟ್ಟೆಯಲ್ಲಿ, ಬಂದರು ಕಟ್ಟೆಯಲ್ಲಿ, ಸಣ್ಣ ಬಂದರು ಕಟ್ಟೆಯಲ್ಲಿ ಅಥವಾ ಅಂತಹುದೇ ಆವರಣಗಳಲ್ಲಿ ಹಡಗು ಕಟ್ಟೆ ಕೆಲಸವು ಆಗೊಮ್ಮೆ ಈಗೊಮ್ಮೆ ಮಾತ್ರ ನಡೆಯುತ್ತದೆ ಅಥವಾ ಹಡಗುಗಳಿಗೆ ಅಥವಾ ನೌಕೆಗಳ ಸಂಚಾರವು ಕಡಿಮೆಯಿದೆ ಮತ್ತು ಸಣ್ಣ ಹಡಗುಗಳಿಗೆ ಹಾಗೂ ಮೀನುಗಾರಿಕೆ ಹಡಗುಗಳಿಗೆ ಸೀಮಿತವಾಗಿದೆ ಎಂದು ಸರ್ಕಾರಕ್ಕೆ ಮನವರಿಕೆಯಾದರೆ ಅಂಥ ಯಾವುದೇ ಬಂದರಿಗೆ, ಹಡಗು ಕಟ್ಟೆಗೆ, ಬಂದರು ಕಟ್ಟೆಗೆ, ರೇವುಕಟ್ಟೆಗೆ ಅಥವಾ ಅಂತಹುದೇ ಆವರಣಗಳಿಗೆ; ಅಥವಾ

(ಬಿ) ಯಾವುದೇ ನಿರ್ದಿಷ್ಟ ಹಡಗಿನ ಅಥವಾ ಹಡಗುಗಳ ವೈಲಕ್ಷಣಗಳನ್ನು, ಅಲ್ಲಿ ನಡೆಯುತ್ತಿರುವ ಹಡಗು ಕಟ್ಟೆ ಕೆಲಸದ ಸ್ವರೂಪವನ್ನು, ಪ್ರಮಾಣವನ್ನು, ನಿಯತಕಾಲಿಕತೆಯನ್ನು ಮತ್ತು ಎಲ್ಲ ಇತರ ಸುಸಂಬದ್ಧ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು, ವಿನಾಯಿತಿ ನೀಡುವುದು ಅವಶ್ಯಕವೆಂದು ಆ ಸರ್ಕಾರಕ್ಕೆ ಮನವರಿಕೆಯಾದರೆ, ಅಂಥ ಯಾವುದೇ ನಿರ್ದಿಷ್ಟ ಹಡಗಿಗೆ ಅಥವಾ ಹಡಗುಗಳ ವರ್ಗಕ್ಕೆ

- ಈ ಅಧಿನಿಯಮದ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳು ಅಥವಾ ಯಾವುದೇ ಉಪಬಂಧವು ಅನ್ವಯವಾಗದಂತೆ ವಿನಾಯಿತಿ ನೀಡಬಹುದು:

ಪರಂತು, ಸಮುಚಿತ ಸರ್ಕಾರವು ಅಂಥ ವಿನಾಯಿತಿ ನೀಡುವುದರಿಂದ ಹಡಗು ಕಟ್ಟೆ ಕೆಲಸಗಾರರ ಆರೋಗ್ಯದ, ಸುರಕ್ಷತೆಯ ಮತ್ತು ಕಲ್ಯಾಣದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದಿಲ್ಲವೆಂದು ಮನವರಿಕೆ ಮಾಡಿಕೊಂಡ ಹೊರತು, ಈ ಪ್ರಕರಣದ ಮೇರೆಗೆ ವಿನಾಯಿತಿಯನ್ನು ನೀಡತಕ್ಕದ್ದಲ್ಲ.

**13. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**- ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ ಅನ್ನು ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**14. ದಂಡನೆಗಳು,** - (1) ಯಾರೇ ಆಗಲಿ,-

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಪರಿವೀಕ್ಷಕನು ಚಲಾಯಿಸುವಾಗ, ಅವನಿಗೆ ಉದ್ದೇಶಪೂರ್ವಕವಾಗಿ ಅಡ್ಡಿಯುಂಟು ಮಾಡಿದರೆ ಅಥವಾ ವಿನಿಯಮಗಳಿಗೆ ಅನುಸಾರವಾಗಿ ಅಥವಾ ಅನ್ಯಥಾ ಯಾವುದೇ ಹಡಗು ಕಟ್ಟೆ ಕೆಲಸಕ್ಕೆ ಸಂಬಂಧಿಸಿದಂತೆ ಇಟ್ಟಿರುವ ಯಾವುದೇ ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಪರಿವೀಕ್ಷಕನು ಕೇಳಿದಾಗ ಅವುಗಳನ್ನು ಹಾಜರುಪಡಿಸಲು ವಿಫಲನಾದರೆ ಅಥವಾ ಯಾರೇ ವ್ಯಕ್ತಿಯನ್ನು ಪರಿವೀಕ್ಷಕನ ಮುಂದೆ ಹಾಜರಾಗುವಂತೆ ಅಥವಾ ಪರಿವೀಕ್ಷಕನಿಂದ ಒಳಗಾಗದಂತೆ ತಡೆಯಲು ಬಚ್ಚಿಟ್ಟರೆ ಅಥವಾ ತಡೆದರೆ ಅಥವಾ ತಡೆಯಲು ಪ್ರಯತ್ನಿಸಿದರೆ; ಅಥವಾ

(ಬಿ) ವಿದ್ಯುಕ್ತವಾಗಿ ಅಧಿಕಾರ ಪಡೆದಿದ್ದ ಅಥವಾ ಅವಶ್ಯಕತೆಯಿರುವ ಸಂದರ್ಭದಲ್ಲಿ ಹೊರತು, ವಿನಿಯಮಗಳ ಮೂಲಕ ಅಥವಾ ಅವುಗಳ ಮೇರೆಗೆ ಒದಗಿಸಬೇಕೆಂದು ಅಗತ್ಯಪಡಿಸಿರುವಂತಹ ಯಾವುದೇ ಬೇಲಿಯನ್ನು, ಗ್ಯಾಂಗ್‌ವೇಯನ್ನು, ಸಾಧನ ಸಲಕರಣೆಗಳನ್ನು, ಏಣಿಗಳನ್ನು, ಜೀವರಕ್ಷಕ ಸಾಧನಗಳನ್ನು ಅಥವಾ ಉಪಕರಣವನ್ನು, ದೀಪವನ್ನು, ಗುರುತನ್ನು, ಸಾರುವೆಯನ್ನು ಅಥವಾ ಇತರ ವಸ್ತುವನ್ನು ತೆಗೆದುಹಾಕಿದರೆ; ಅಥವಾ

(ಸಿ) ಅವಶ್ಯಕತೆಯಿದ್ದ ಸಂದರ್ಭದಲ್ಲಿ ತೆಗೆದುಹಾಕಲಾಗಿದ್ದ ಯಾವುದೇ ಅಂಥ ಬೇಲಿಯನ್ನು, ಗ್ಯಾಂಗ್‌ವೇಯನ್ನು, ಸಾಧನ ಸಲಕರಣೆಗಳನ್ನು, ಏಣಿಯನ್ನು, ಜೀವರಕ್ಷಕ ಸಾಧನಗಳನ್ನು ಅಥವಾ ಉಪಕರಣವನ್ನು, ದೀಪವನ್ನು, ಗುರುತನ್ನು, ಸಾರುವೆಯನ್ನು ಅಥವಾ ಇತರ ವಸ್ತುವನ್ನು, ಅವುಗಳನ್ನು ಯಾವ ಅವಧಿಗೆ ತೆಗೆದುಹಾಕುವ ಅವಶ್ಯಕತೆ ಇತ್ತೊ ಆ ಅವಧಿಯು ಅಂತ್ಯಗೊಂಡ ಮೇಲೆ ಅವುಗಳನ್ನು ಪೂರ್ವಸ್ಥಿತಿಗೆ ತರದೆ ಹಾಗೇ ಬಿಟ್ಟುಬಿಟ್ಟರೆ,

- ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ವಿನಿಯಮಗಳಲ್ಲಿ ಯಾವುದನ್ನಾದರೂ ಪಾಲಿಸುವುದು ಯಾವ ವ್ಯಕ್ತಿಯ ಕರ್ತವ್ಯವಾಗಿದೆಯೋ, ಆ ಯಾರೇ ವ್ಯಕ್ತಿಯು ಅಂಥ ವಿನಿಯಮಗಳನ್ನು ಉಲ್ಲಂಘಿಸಿದರೆ ಮತ್ತು ಅಂಥ ಉಲ್ಲಂಘನೆಯ ಪರಿಣಾಮವಾಗಿ,-

(ಎ) ಹಡಗು ಕಟ್ಟೆ ಕೆಲಸಗಾರನು ಯಾವುದೇ ಮಾರಣಾಂತಿಕ ಅಪಘಾತಕ್ಕೊಳಗಾದರೆ, ಅಥವಾ

(ಬಿ) ಹದಿನೈದು ದಿನಗಳಿಗಿಂತ ಹೆಚ್ಚು ಅವಧಿಯವರೆಗೆ ತನ್ನ ಪೂರ್ಣ ಮಜೂರಿಯನ್ನು ಗಳಿಸಲು ಹಡಗು ಕಟ್ಟೆ ಕೆಲಸಗಾರನನ್ನು ಅಸಮರ್ಥಗೊಳಿಸುವಂಥ ಅಪಘಾತ ಉಂಟಾದರೆ,

- ಅಂಥ ವ್ಯಕ್ತಿಯು, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ (ಎ) ಖಂಡದ ಮೇರೆಗೆ ಬರುವ ಪ್ರಕರಣದಲ್ಲಿ ಎರಡು ಸಾವಿರ ರೂಪಾಯಿಗಳಿಗೆ ಮತ್ತು (ಬಿ) ಖಂಡದ ಅಡಿಯಲ್ಲಿ ಬರುವ ಪ್ರಕರಣದಲ್ಲಿ ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆದರೆ ಎರಡು ಪ್ರಕರಣಗಳಲ್ಲಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು ಮತ್ತು ನ್ಯಾಯಾಲಯವು ಜುಲ್ಮಾನೆಯ ಪೂರ್ಣ ಹಣವನ್ನು

ಅಥವಾ ಭಾಗಶಃ ಹಣವನ್ನು ಮೃತ ಹಡಗು ಕಟ್ಟೆ ಕೆಲಸಗಾರನ ಅವಲಂಬಿತನಿಗೆ ಅಥವಾ ಸಂದರ್ಭಾನುಸಾರ, ಗಾಯಗೊಂಡ ಹಡಗು ಕಟ್ಟೆ ಕೆಲಸಗಾರನಿಗೆ ಸಂದಾಯ ಮಾಡುವಂತೆ ಆದೇಶಿಸಬಹುದು.

**ವಿವರಣೆ**:- ಈ ಉಪ-ಪ್ರಕರಣದ ಉಪಬಂಧಗಳು, 21ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ರಚಿಸಬಹುದಾದ ಯಾವುವೇ ಉಪಬಂಧಗಳಿಗೆ ಹೆಚ್ಚಿಗೆಯಾಗಿ ಇರತಕ್ಕದ್ದು.

(3) 11ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ಕರ್ತವ್ಯವನ್ನು ಅಥವಾ ಹೊಣೆಗಾರಿಕೆಯನ್ನು ವಿಧಿಸುವ ಈ ಅಧಿನಿಯಮದ ಅಥವಾ ವಿನಿಯಮಗಳ ಯಾವುದೇ ಉಪಬಂಧವನ್ನು ಯಾರೇ ಹಡಗು ಕಟ್ಟೆ ಕೆಲಸಗಾರನು ಉಲ್ಲಂಘಿಸಿದರೆ, ಅವನು, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

(4) ಈ ಅಧಿನಿಯಮದ ಅಥವಾ ವಿನಿಯಮಗಳ ಯಾವುದೇ ಉಪಬಂಧಗಳ ಮೇರೆಗೆ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವ ಯಾರೇ ವ್ಯಕ್ತಿಯು ಹಿಂದಿನ ಅಪರಾಧ ನಿರ್ಣಯವಾದ ಎರಡು ವರ್ಷಗಳ ಒಳಗೆ ಮತ್ತು ಅದೇ ಉಪಬಂಧದ ಉಲ್ಲಂಘನೆಯನ್ನು ಒಳಗೊಳ್ಳುವ ಅಪರಾಧಕ್ಕಾಗಿ ಪುನಃ ಅಪರಾಧಿಯೆಂದು ನಿರ್ಣೀತನಾದರೆ, ಅವನು ತರುವಾಯದ ಪ್ರತಿಯೊಂದು ಅಪರಾಧ ನಿರ್ಣಯಕ್ಕಾಗಿ ಅಂಥ ಉಪಬಂಧದ ಮೊದಲನೆಯ ಉಲ್ಲಂಘನೆಗಾಗಿ ಅವನು ಗುರಿಯಾಗಬಹುದಾಗಿದ್ದ ಕಾರಾವಾಸ ಶಿಕ್ಷೆಯ ಎರಡುಪಟ್ಟು ಕಾರಾವಾಸ ಶಿಕ್ಷೆಗೆ ಗುರಿಯಾಗತಕ್ಕದ್ದು.

**15. ಕೆಲವು ಪ್ರಕರಣಗಳಲ್ಲಿ ಅಪರಾಧಕ್ಕೆ ಹೊಣೆಗಾರರಾದಂಥ ವ್ಯಕ್ತಿಗಳನ್ನು ನಿರ್ಧರಿಸುವುದು.**- ಈ ಅಧಿನಿಯಮದ ಅಥವಾ ವಿನಿಯಮಗಳ ಮೂಲಕ ಶಿಕ್ಷಾರ್ಹವಾದ ಅಪರಾಧವನ್ನು ಮಾಡುವ ಅಥವಾ ಅದಕ್ಕೆ ಯಾವುದೇ ದುಷ್ಪ್ರೇರಣೆ ನೀಡುವ ವ್ಯಕ್ತಿಯು ಒಂದು ಫರ್ಮ್ ಆಗಿದ್ದರೆ ಅಥವಾ ವ್ಯಕ್ತಿಗಳ ಇತರ ಸಂಘವಾಗಿದ್ದರೆ ಅಥವಾ ಕಂಪನಿಯಾಗಿದ್ದರೆ ಅಥವಾ ಸ್ಥಳೀಯ ಪ್ರಾಧಿಕಾರವಾಗಿದ್ದರೆ, ಅದರ ಎಲ್ಲ ಅಥವಾ ಯಾರೇ ಪಾಲುದಾರರನ್ನು ಅಥವಾ ಸದಸ್ಯರನ್ನು ಅಥವಾ ನಿರ್ದೇಶಕರುಗಳನ್ನು ಹಾಗೂ ಆ ಫರ್ಮ್‌ನ್ನು, ವ್ಯಕ್ತಿಗಳ ಸಂಘವನ್ನು, ಕಂಪನಿಯನ್ನು ಅಥವಾ ಸ್ಥಳೀಯ ಪ್ರಾಧಿಕಾರವನ್ನು ಅಂಥ ಅಪರಾಧದ ಅಥವಾ ದುಷ್ಪ್ರೇರಣೆಯ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅದರ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಯಾವುದೇ ಹಡಗು ಕಟ್ಟೆ ಕೆಲಸವು ಯಾವ ಬಂದರಿನಲ್ಲಿ ನಡೆಯುತ್ತಿದೆಯೋ ಆ ಬಂದರಿನ ಮುಖ್ಯ ಪರಿವೀಕ್ಷಕನಿಗೆ ಮತ್ತು ಪರಿವೀಕ್ಷಕನಿಗೆ, ಫರ್ಮ್, ಸಂಘವು ಅಥವಾ ಕಂಪನಿಯು ಪ್ರತಿಯೊಂದು ಸಂದರ್ಭದಲ್ಲಿ ಈ ಅಧಿನಿಯಮವು ಯಾವ ಸ್ಥಳಕ್ಕೆ ಅನ್ವಯಿಸುತ್ತದೆಯೋ ಆ ಯಾವುದೇ ಸ್ಥಳದ ನಿವಾಸಿಯಾಗಿರುವಂಥ ಮತ್ತು ಪ್ರತಿಯೊಂದು ಸಂದರ್ಭದಲ್ಲಿ ಅಂಥ ಫರ್ಮ್‌ನ, ಸಂಘದ ಅಥವಾ ಕಂಪನಿಯ ಆಡಳಿತದ ಪ್ರಭಾರವನ್ನು ಅಥವಾ ಅದರ ಅತ್ಯಧಿಕ ಸಂಖ್ಯೆಯ ಷೇರುಗಳನ್ನು ಹೊಂದಿರುವಂಥ,

(ಎ) ಫರ್ಮಿನ ಸಂದರ್ಭದಲ್ಲಿ, ಅದರ ಯಾರೇ ಪಾಲುದಾರನನ್ನು;

(ಬಿ) ಸಂಘದ ಸಂದರ್ಭದಲ್ಲಿ, ಅದರ ಯಾರೇ ಸದಸ್ಯನನ್ನು;

(ಸಿ) ಕಂಪನಿಯ ಸಂದರ್ಭದಲ್ಲಿ, ಅದರ ಯಾರೇ ನಿರ್ದೇಶಕನನ್ನು

- ಈ ಅಧಿನಿಯಮದ ಉದ್ದೇಶಗಳಿಗಾಗಿ, ಯಾವುವೇ ಹಡಗು ಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ನಾಮನಿರ್ದೇಶಿಸಲಾಗಿದೆಯೆಂದು ಲಿಖಿತದಲ್ಲಿ ನೋಟೀಸುಗಳನ್ನು ಕೊಟ್ಟಿರುವಲ್ಲಿ ಸಂದರ್ಭಾನುಸಾರ, ಅಂಥ ಪಾಲುದಾರನು, ಸದಸ್ಯನು ಅಥವಾ ನಿರ್ದೇಶಕನನ್ನು ಅವನು ಹಾಗೆ ವಾಸವಾಗಿರುವುದು ಮತ್ತು ಮೇಲೆ ಹೇಳಿದಂತೆ ಪ್ರಭಾರವನ್ನು ಹೊಂದಿರುವುದು ಅಥವಾ ಅತ್ಯಧಿಕ ಷೇರುಗಳನ್ನು ಹೊಂದಿರುವುದು ಎಲ್ಲಿಯವರೆಗೆ ಮುಂದುವರಿಯುತ್ತದೋ ಅಲ್ಲಿಯವರಗೆ ಅವನನ್ನು, ಅವನ ನಾಮನಿರ್ದೇಶನವನ್ನು ರದ್ದುಗೊಳಿಸಲಾಗಿದೆಯೆಂದು ಅಥವಾ ಸಂದರ್ಭಾನುಸಾರ, ಅವನು ಪಾಲುದಾರನಾಗಿರುವುದು, ಸದಸ್ಯನಾಗಿರುವುದು ಅಥವಾ ನಿರ್ದೇಶಕನಾಗಿರುವುದು ನಿಂತು ಹೋಗಿದೆಯೆಂದು ಲಿಖಿತದಲ್ಲಿ ನೋಟೀಸನ್ನು ಮುಖ್ಯ ಪರಿವೀಕ್ಷಕನು ಸ್ವೀಕರಿಸಿದ ಹೊರತು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ಹಡಗು ಕಟ್ಟೆ ಕೆಲಸದ ಪ್ರಭಾರ ಹೊಂದಿರುವ ವ್ಯಕ್ತಿಯಾಗಿರುವನೆಂದು ಭಾವಿಸತ್ಕದ್ದು.

**16. ಆದೇಶಗಳನ್ನು ಮಾಡಲು ನ್ಯಾಯಾಲಯದ ಅಧಿಕಾರ.**- (1) ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ ನ್ಯಾಯಾಲಯವು, ಅವನಿಗೆ ಯಾವುದೇ ಶಿಕ್ಷೆಯನ್ನು ವಿಧಿಸುವುದರ ಜೊತೆಗೆ, ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ (ಈ ಸಂಬಂಧ ಸಲ್ಲಿಸಿದ ಅರ್ಜಿಯ ಮೇಲೆ ಕಾಲಕಾಲಕ್ಕೆ ನ್ಯಾಯಾಲಯವು ವಿಸ್ತರಿಸಬಹುದಾದಂಥ ಅವಧಿಯೊಳಗಾಗಿ) ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿತ್ತೋ ಆ ವಿಷಯಗಳನ್ನು ಬಗೆಹರಿಸುವುದಕ್ಕಾಗಿ ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅವನನ್ನು ಅಗತ್ಯಪಡಿಸಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಆದೇಶವನ್ನು ಮಾಡಿರುವಲ್ಲಿ, ಆ ಅವಧಿಯಲ್ಲಿ ಅಥವಾ ವಿಸ್ತರಿಸಿದ ಅವಧಿಯೇನಾದರೂ ಇದ್ದರೆ, ಆ ವಿಸ್ತರಿಸಿದ ಅವಧಿಯಲ್ಲಿ, ಆ ಅಪರಾಧದ ಮುಂದುವರಿಕೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಆ ವ್ಯಕ್ತಿಯು ಹೊಣೆಗಾರನಾಗಿರತಕ್ಕದ್ದಲ್ಲ, ಆದರೆ ಅಂಥ ಅವಧಿಯು ಅಥವಾ ವಿಸ್ತರಿಸಲಾದ ಅವಧಿಯ ಮುಕ್ತಾಯವಾದ ಮೇಲೆ ನ್ಯಾಯಾಲಯದ ಆದೇಶವನ್ನು ಸಂಪೂರ್ಣವಾಗಿ ಪಾಲಿಸದಿದ್ದರೆ, ಆ ವ್ಯಕ್ತಿಯು ಮತ್ತೆ ಅಪರಾಧವೆಸಗಿದ್ದಾನೆಂದು

ಭಾವಿಸತಕ್ಕದ್ದು ಮತ್ತು ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಅವಧಿಯು ಮುಕ್ತಾಯವಾದ ತರುವಾಯ ಆ ಆದೇಶವನ್ನು ಪಾಲಿಸದಿರುವಂಥ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

17. **ಅಧಿಕಾರವ್ಯಾಪ್ತಿಗೆ ಸಂಬಂಧಿಸಿದ ಉಪಬಂಧ.**– (1) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಅಥವಾ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗಿನ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ನಡೆಸತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಪರಿವೀಕ್ಷಕನ ಹೊರತು ಅಥವಾ ಅವನ ಪೂರ್ವ ಮಂಜೂರಾತಿ ಪಡೆದ ಹೊರತು ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

(3) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಜುಲ್ಮಾನೆಯಿಂದ ಶಿಕ್ಷಾರ್ಹವಾದ ಅಪರಾಧದ ಸಂದರ್ಭದಲ್ಲಿ,–

(i) ಅಪರಾಧವು ನಡೆದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ; ಅಥವಾ

(ii) ಅಪರಾಧ ನಡೆದಿರುವುದು ಪರಿವೀಕ್ಷಕನಿಗೆ ತಿಳಿಯದಿರುವಲ್ಲಿ ಆ ಅಪರಾಧವು ಯಾವ ದಿನದಂದು ಪರಿವೀಕ್ಷಕನ ತಿಳಿವಳಿಕೆಗೆ ಬಂದಿತೋ ಆ ಮೊದಲ ದಿನದಿಂದ ಆರು ತಿಂಗಳುಗಳ ಒಳಗಾಗಿ; ಅಥವಾ

(ಬಿ) ಕಾರಾವಾಸದಿಂದ ಶಿಕ್ಷಾರ್ಹವಾದ ಅಪರಾಧದ ಸಂದರ್ಭದಲ್ಲಿ,–

(i) ಅಪರಾಧವು ನಡೆದ ದಿನಾಂಕದಿಂದ ಒಂದು ವರ್ಷದ ಒಳಗಾಗಿ; ಅಥವಾ

(ii) ಅಪರಾಧ ನಡೆದಿರುವುದು ಪರಿವೀಕ್ಷಕನಿಗೆ ತಿಳಿಯದಿರುವಲ್ಲಿ ಆ ಅಪರಾಧವು ಯಾವ ದಿನದಂದು ಪರಿವೀಕ್ಷಕನ ತಿಳಿವಳಿಕೆಗೆ ಬಂದಿತೋ ಆ ಮೊದಲ ದಿನದಿಂದ ಒಂದು ವರ್ಷದ ಒಳಗಾಗಿ; ಅಥವಾ

(iii) ಅಪರಾಧವನ್ನು ಯಾರು ಮಾಡಿರುವರೆಂದು ತಿಳಿಯದಿರುವಲ್ಲಿ; ಅಪರಾಧಿಯ ಗುರುತು ಯಾವ ದಿನದಂದು ಪರಿವೀಕ್ಷಕನಿಗೆ ತಿಳಿದುಬಂದಿತೋ ಆ ಮೊದಲ ದಿನದಿಂದ ಆರು ತಿಂಗಳುಗಳ ಒಳಗಾಗಿ

– ಆ ಅಪರಾಧದ ಬಗ್ಗೆ ದೂರನ್ನು ಸಲ್ಲಿಸಿದ್ದ ಹೊರತು ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗೆ ಆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ, ಮುಂದುವರಿಯುತ್ತಿರುವ ಅಪರಾಧದ ಸಂದರ್ಭದಲ್ಲಿ ಕಾಲಪರಿಮಿತಿಯ ಹೊಸ ಅವಧಿಯು, ಆ ಅಪರಾಧವು ಯಾವ ಕಾಲಾವಧಿಯಲ್ಲಿ ಮುಂದುವರಿಯುತ್ತದೆಯೋ ಆ ಕ್ಷಣದಿಂದ ಪ್ರಾರಂಭವಾಗತಕ್ಕದ್ದು.

18. **ಜುಲ್ಮಾನೆಗೆ ಸಂಬಂಧಪಟ್ಟ ಉಪಬಂಧ.**– ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 29ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಥವಾ ವಿನಿಯಮಗಳ ಮೇರೆಗೆ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಗೆ, ಈ ಅಧಿನಿಯಮದ ಅಥವಾ ವಿನಿಯಮಗಳ ಮೂಲಕ ಅಧಿಕೃತಗೊಳಿಸಿದ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರು ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು ಐದು ಸಾವಿರ ರೂಪಾಯಿಗಳಿಗೆ ಮೀರಿದ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

19. **ಇತರ ಅಪರಾಧಗಳಿಗೆ ಶಿಕ್ಷೆ ವಿಧಿಸುವುದಕ್ಕೆ ಸಂಬಂಧಿಸಿದ ಸಾಮಾನ್ಯ ಉಪಬಂಧ.**– ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅಂಥ ಉಲ್ಲಂಘನೆಗಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಇತರೆ ದಂಡವನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸಿರದಿದ್ದರೆ, ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

20. **ನಿಯಮವನ್ನು ರಚಿಸಲು ಅಧಿಕಾರ.**– ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಕೆಳಕಂಡ ಎಲ್ಲ ಉದ್ದೇಶಗಳಿಗಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿ ಈ ಅಧಿನಿಯಮಕ್ಕೆ ಸುಸಂಗತವಾಗಿರುವಂಥ ನಿಯಮಗಳನ್ನು ರಚಿಸಬಹುದು, ಎಂದರೆ,–

(ಎ) ಪರಿವೀಕ್ಷಕನು ಈ ಅಧಿನಿಯಮದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಯಾವ ರೀತಿ ಚಲಾಯಿಸಬೇಕೋ ಆ ರೀತಿ;

(ಬಿ) ಯಾವುದೇ ಹಡಗು ಕಟ್ಟೆ ಕೆಲಸ ನಡೆಯುತ್ತಿರುವ ಹಡಗುಗಳ ಆವರಣಗಳ ಪರಿವೀಕ್ಷಣೆ;

(ಸಿ) ಈ ಅಧಿನಿಯಮದ ಮೇರೆಗೆ ಮಾಡಿದ ಆದೇಶಗಳನ್ನು ಜಾರಿಗೊಳಿಸುವ ರೀತಿ;

(ಡಿ) 9ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಸಲಹಾ ಸಮಿತಿಯ ಸದಸ್ಯರ ಪದಾವಧಿ ಮತ್ತು ಅವರ ಸೇವೆಯ ಇತರ ಷರತ್ತುಗಳು, ಅವರಲ್ಲಿ ಉಂಟಾಗುವ ಖಾಲಿ ಸ್ಥಾನಗಳನ್ನು ತುಂಬುವ ರೀತಿ; ಮತ್ತು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವರು ಅನುಸರಿಸಬೇಕಾದ ಕಾರ್ಯವಿಧಾನ;

(ಇ) 10ನೇ ಪ್ರಕರಣದ ಮೇರೆಗೆ ವಿಚಾರಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ; ಮತ್ತು

(ಎಫ್) ಈ ಅಧಿನಿಯಮದ ಮೇರೆಗೆ ನಿಯಮಗಳ ಮೂಲಕ ಯಾವ ವಿಷಯಕ್ಕೆ ಉಪಬಂಧ ಕಲ್ಪಿಸಬೇಕಾಗಿದೆಯೋ ಆ ಯಾವುದೇ ಇತರ ವಿಷಯ.

**21. ವಿನಿಯಮಗಳನ್ನು ರಚಿಸಲು ಅಧಿಕಾರ.**– (1) ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಡಗು ಕಟ್ಟೆ ಕೆಲಸಗಾರರ ಸುರಕ್ಷತೆಗೆ, ಆರೋಗ್ಯಕ್ಕೆ ಮತ್ತು ಕಲ್ಯಾಣಕ್ಕೆ ಉಪಬಂಧ ಕಲ್ಪಿಸಲು ಈ ಅಧಿನಿಯಮಕ್ಕೆ ಸುಸಂಗತವಾಗಿರುವಂಥ ವಿನಿಯಮಗಳನ್ನು ರಚಿಸಬಹುದು.

(2) ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲ ಉದ್ದೇಶಗಳಿಗಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿ, ಎಂದರೆ,–

(ಎ) ಸಮುದ್ರ ದಂಡೆಯಲ್ಲಿ, ಹಡಗಿನಲ್ಲಿ, ಹಡಗು ಕಟ್ಟೆಯಲ್ಲಿ, ನಿರ್ಮಿತಿಯಲ್ಲಿ ಮತ್ತು ಹಡಗು ಕಟ್ಟೆ ಕೆಲಸ ಯಾವ ಸ್ಥಳದಲ್ಲಿ ನಡೆಯುತ್ತಿದೆಯೋ ಆ ಇತರ ಸ್ಥಳಗಳಲ್ಲಿ ಹಡಗು ಕಟ್ಟೆ ಕೆಲಸ ನಡೆಯುತ್ತಿರುವ ಸ್ಥಳಗಳ ಸುರಕ್ಷೆಗಾಗಿ, ನಿರ್ಮಾಣಕ್ಕೆ, ಸಿದ್ಧಗೊಳಿಸುವುದಕ್ಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಸಾಮಾನ್ಯ ಅಗತ್ಯತೆಗಳಿಗೆ ಉಪಬಂಧ ಕಲ್ಪಿಸುವುದು;

(ಬಿ) ಹಡಗು ಕಟ್ಟೆ ಕೆಲಸಗಾರರು ಕೆಲಸಕ್ಕೆ ಹೋಗುವುದಕ್ಕಾಗಿ ಬಳಸುವಂಥ ಯಾವುದೇ ಹಡಗು ಕಟ್ಟೆಯ, ಬಂದರು ಕಟ್ಟೆಯ, ಸಣ್ಣ ಬಂದರು ಕಟ್ಟೆಯ ಅಥವಾ ಇತರ ಸ್ಥಳಗಳ ಮೇಲೆ ಇರುವ ನಿಯತ ದಾರಿಗಳ ಸುರಕ್ಷತೆಗಾಗಿ ಮತ್ತು ಅಂಥ ಸ್ಥಳಗಳಿಗೆ ಮತ್ತು ಪ್ರಾಜೆಕ್ಟ್‌ಗಳಿಗೆ ಬೇಲಿ ಹಾಕುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ಸಿ) ಹಡಗು ಕಟ್ಟೆಯ ಎಲ್ಲ ಪ್ರದೇಶಗಳಿಗೆ, ಹಡಗಿಗೆ, ಯಾವುದೇ ಇತರ ನೌಕೆಗೆ, ಹಡಗು ಕಟ್ಟೆ ನಿರ್ಮಿಸಲು ಅಥವಾ ಯಾವುದೇ ಹಡಗು ಕಟ್ಟೆ ಕೆಲಸ ನಡೆಯುತ್ತಿರುವ ಕೆಲಸದ ಸ್ಥಳಗಳಿಗೆ ಮತ್ತು ಹಡಗು ಕಟ್ಟೆ ಕೆಲಸಗಾರರು ತಮ್ಮ ನಿಯೋಜನೆ ಅವಧಿಯಲ್ಲಿ ಯಾವ ಸ್ಥಳಗಳಿಗೆ ಹೋಗಬೇಕಾದ ಅಗತ್ಯವಿದೆಯೋ ಅಂಥ ಸ್ಥಳಗಳಿಗೆ ಹೋಗಲು ಇರುವ ಎಲ್ಲಾ ದಾರಿಗಳಿಗೆ ಸಾಕಷ್ಟು ಬೆಳಕಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಉಪಬಂಧ ಕಲ್ಪಿಸುವುದು;

(ಡಿ) ಹಡಗು ಕಟ್ಟೆ ಕೆಲಸಗಾರರು ನಿಯೋಜನೆಗೊಂಡಿರುವ ಹಡಗಿನಲ್ಲಿನ ಪ್ರತಿಯೊಂದು ಕಟ್ಟಡದಲ್ಲಿ ಅಥವಾ ಆವೃತ ಸ್ಥಳದಲ್ಲಿ ಸಾಕಷ್ಟು ಗಾಳಿ, ಬೆಳಕು ಮತ್ತು ಸೂಕ್ತ ತಾಪಮಾನವನ್ನು ಒದಗಿಸುವುದು ಮತ್ತು ನಿರ್ವಹಿಸುವುದು;

(ಇ) ಬೆಂಕಿಯನ್ನು ಮತ್ತು ಸ್ಫೋಟವನ್ನು ತಡೆಗಟ್ಟಲು ಮತ್ತು ಅದರಿಂದ ರಕ್ಷಣೆ ಒದಗಿಸಲು ಉಪಬಂಧ ಕಲ್ಪಿಸುವುದು;

(ಎಫ್) ಹಡಗುಗಳಿಗೆ, ಸಾಮಾನು ತುಂಬುವ ಸ್ಥಳಗಳಿಗೆ, ಸಾರುವೆಗಳಿಗೆ, ಸಾಧನ ಸಾಮಗ್ರಿಗಳಿಗೆ, ಎತ್ತುವ ಉಪಕರಣಗಳಿಗೆ ಮತ್ತು ಕೆಲಸ ನಿರ್ವಹಿಸುವ ಇತರ ಸ್ಥಳಗಳಿಗೆ ಸುರಕ್ಷಿತ ಪ್ರವೇಶ ಮಾರ್ಗವನ್ನು ಒದಗಿಸಲು ಉಪಬಂಧ ಕಲ್ಪಿಸುವುದು;

(ಜಿ) ಹಡಗನಲ್ಲಿರುವ ಸರಕು ಇಳಿಸುವ ದ್ವಾರಗಳನ್ನು ತೆಗೆಯುವ ಮತ್ತು ಮುಚ್ಚುವ ಕೆಲಸದಲ್ಲಿ ತೊಡಗಿರುವ ಕೆಲಸಗಾರರ ಸುಕ್ಷತೆಗೆ ಮತ್ತು ಅವರಿಗೆ ಅಪಾಯಕಾರಿಯಾಗಬಹುದಾದ ಹಡಗು ಕಟ್ಟೆಗಳಲ್ಲಿನ ದಾರಿಗಳ ಮತ್ತು ಇತರ ಕಂಡಿಗಳ ರಕ್ಷಣೆಗೆ ಉಪಬಂಧ ಕಲ್ಪಿಸುವುದು;

(ಹೆಚ್) ಸರಕು ತುಂಬುವ ಅಥವಾ ಸರಕು ಇಳಿಸುವ ಕಾರ್ಯಾಚರಣೆಯ ಸಮಯದಲ್ಲಿ ಕೆಲಸಗಾರರಿಗೆ ಸರಕು ತಗುಲಿ ಹಡಗಿನಿಂದ ಹೊರಕ್ಕೆ ಬೀಳುವ ಅಪಾಯವನ್ನು ತಪ್ಪಿಸಲು ಹಡಗು ಕಟ್ಟೆಗಳಲ್ಲಿನ ಕೆಲಸಗಾರರಿಗೆ ಸುರಕ್ಷತೆಯನ್ನು ಒದಗಿಸಲು ಉಪಬಂಧ ಕಲ್ಪಿಸುವುದು;

(ಐ) ಭಾರ ಎತ್ತುವ ಉಪಕರಣಗಳ ಮತ್ತು ಇತರ ಸರಕು ನಿರ್ವಹಣಾ ಉಪಕರಣಗಳ ನಿರ್ಮಾಣಕ್ಕಾಗಿ, ನಿರ್ವಹಣೆಗಾಗಿ ಮತ್ತು ಬಳಕೆಗಾಗಿ ಮತ್ತು ಭಾರವನ್ನು ತಡೆದುಕೊಳ್ಳುವ ಅಥವಾ ಅದಕ್ಕೆ ಆಧಾರವಾಗಿರುವ ಹೇರು ಹಲಗೆಗಳಂಥ ಸೇವೆಗಳಿಗೆ ಮತ್ತು ಅವಶ್ಯವಿರುವಲ್ಲಿ, ಅವುಗಳ ಮೇಲೆ ಸುರಕ್ಷತಾ ಉಪಕರಣಗಳನ್ನು ಒದಗಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(ಜೆ) ಫ್ರೈಟ್ ಕಂಟೈನರ್ ಟರ್ಮಿನಲ್‌ಗಳಲ್ಲಿ ಅಥವಾ ಇತರ ಟರ್ಮಿನಲ್‌ಗಳಲ್ಲಿ ಏಕೀಕೃತ ಸರಕು ಕಾರ್ಗೋ ನಿರ್ವಹಣೆಗಾಗಿ ನಿಯೋಜಿತರಾದ ಕೆಲಸಗಾರರ ಸುರಕ್ಷತೆಗಾಗಿ ಉಪಬಂಧ ಕಲ್ಪಿಸುವುದು;

(ಕೆ) ಯಂತ್ರೋಪಕರಣಗಳಿಗೆ, ವಿದ್ಯುತ್ ಪ್ರವಹಿಸುತ್ತಿರುವ ವಾಹಕಗಳಿಗೆ, ಆವಿ ಕೊಳವೆಗಳಿಗೆ ಮತ್ತು ಅಪಾಯಕರವಾದ ತೆರೆದ ಜಾಗಗಳಿಗೆ ಬೇಲಿ ಹಾಕುವುದಕ್ಕೆ ಉಪಬಂಧ ಕಲ್ಪಿಸುವುದು;

(ಎಲ್) ಸಾರುವೆಗಳ ನಿರ್ಮಾಣಕ್ಕೆ, ನಿರ್ವಹಣೆಗೆ ಮತ್ತು ಬಳಕೆಗೆ ಉಪಬಂಧ ಕಲ್ಪಿಸುವುದು;

(ಎಂ) ಹಡಗನ್ನು ಯಾನಕ್ಕೆ ಸಿದ್ಧಪಡಿಸುವುದಕ್ಕೆ ಮತ್ತು ಹಡಗಿನಲ್ಲಿನ ಮೇಲಕ್ಕೆತ್ತುವ ಸಾಧನಗಳನ್ನು ಉಪಯೋಗಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(ಎನ್) ಹಡಗು ಕಟ್ಟೆ ಕೆಲಸದಲ್ಲಿ ಉಪಯೋಗಿಸುವ ಸರಪಳಿಗಳನ್ನು ಮತ್ತು ಹಗ್ಗಗಳೂ ಒಳಗೊಂಡಂತೆ ಬಿಡಿಬಿಡಿಯಾದ ಸಾಧನ ಸಲಕರಣೆಗಳನ್ನು ಮತ್ತು ಜೋಲಿ ಕೊಕ್ಕೆಗಳನ್ನು ಮತ್ತು ಇತರ ಭಾರ ಎತ್ತುವ ಸಾಧನಗಳನ್ನು ಪರಿಶೀಲಿಸುವುದಕ್ಕೆ, ಪರೀಕ್ಷಿಸುವುದಕ್ಕೆ, ತಪಾಸಣೆ ಮಾಡುವುದಕ್ಕೆ ಮತ್ತು ಪ್ರಮಾಣೀಕರಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(ಓ) ಸಾಮಾನು ತುಂಬುವ ಸ್ಥಳ, ತೊಟ್ಟಿ, ಲಾಳಿಕೆ ತೊಟ್ಟಿ ಅಥವಾ ಅಂತಹುದೇ ರೀತಿಯ ಸ್ಥಳಗಳಲ್ಲಿ ಅಥವಾ ಕಲ್ಲಿದ್ದಲನ್ನು ಅಥವಾ ಇತರ ದೊಡ್ಡ ಪ್ರಮಾಣದ ಸರಕುಗಳನ್ನು ನಿರ್ವಹಿಸುವಾಗ ಸಾಮಾನು ತುಂಬುವ ಸ್ಥಳದ ಅಟ್ಟಗಳ ನಡುವೆ ಕೆಲಸಗಾರರು ನಿಯೋಜಿತರಾಗಿರುವಾಗ ಅವರು ಅಪಾಯದಿಂದ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲ ಕಲ್ಪಿಸಲು ತೆಗೆದುಕೊಳ್ಳಬೇಕಾದ ಮುಂಜಾಗರೂಕತೆ ಕ್ರಮಗಳಿಗೆ ಉಪಬಂಧ ಕಲ್ಪಿಸುವುದು;

(ಪಿ) ಸರಕುಗಳನ್ನು ಹಡಗಿನಲ್ಲಿ ಒಟ್ಟುವಾಗ, ಅವುಗಳನ್ನು ಅಲ್ಲಿಂದ ತೆಗೆಯುವಾಗ, ಅಡಕವಾಗಿ ತುಂಬುವಾಗ ಮತ್ತು ಅವುಗಳನ್ನು ತೆಗೆಯುವಾಗ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸುವಾಗ ಅಪಾಯಕಾರಿ ವಿಧಾನಗಳನ್ನು ತಡೆಗಟ್ಟುವ ಸಲುವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳಿಗೆ ಉಪಬಂಧ ಕಲ್ಪಿಸುವುದು;

(ಕ್ಯೂ) ಅಪಾಯಕಾರಿ ವಸ್ತುಗಳನ್ನು ನಿರ್ವಹಿಸುವುದಕ್ಕೆ ಮತ್ತು ಅಪಾಯಕಾರಿ ಮತ್ತು ಹಾನಿಕಾರಕ ಪರಿಸರದಲ್ಲಿ ಕೆಲಸ ನಿರ್ವಹಿಸುವುದಕ್ಕೆ ಮತ್ತು ಅಂಥ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳಿಗೆ ಉಪಬಂಧ ಕಲ್ಪಿಸುವುದು;

(ಆರ್) ಸ್ವಚ್ಛಗೊಳಿಸುವ, ಚಿಪ್ಪಿಂಗ್, ಬಣ್ಣ ಬಳಿಯುವ ಕಾರ್ಯಾಚರಣೆಗೆ ಸಂಬಂಧಪಟ್ಟ ಕೆಲಸಕ್ಕೆ ಮತ್ತು ಅಂಥ ಕೆಲಸಕ್ಕೆ ಸಂಬಂಧಪಟ್ಟಂತೆ ತೆಗೆದುಕೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳಿಗೆ ಉಪಬಂಧ ಕಲ್ಪಿಸುವುದು;

(ಎಸ್) ಸರಕನ್ನು ನಿರ್ವಹಿಸುವುದಕ್ಕಾಗಿ, ಉಪಕರಣಗಳನ್ನು ಕಂಡಿಯ ವಿದ್ಯುಚ್ಚಾಲಿತ ಮುಚ್ಚಳಗಳನ್ನು ಅಥವಾ ಹಡಗಿನ ಕಟ್ಟಡದ ಬಾಗಿಲು, ರ್‍ಯಾಂಪ್ ಹಿಂದು ಮುಂದು ಸರಿಯುವ ಕಾರು ಡೆಕ್ ಮುಂತಾದ ಹಡಗಿನ ವಿದ್ಯುಚ್ಚಾಲಿತ ಸಾಧನ ಸಾಮಗ್ರಿಗಳನ್ನು, ನಿರ್ವಹಿಸುವುದಕ್ಕಾಗಿ ಅಥವಾ ಯಂತ್ರೋಪಕರಣಗಳ ಚಾಲಕರಿಗೆ ಸಿಗ್ನಲ್‌ಗಳನ್ನು ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ಟಿ) ಹಡಗು ಕಟ್ಟೆ ಕೆಲಸಗಾರರ ಸಾಗಣೆಗಾಗಿ ಉಪಬಂಧ ಕಲ್ಪಿಸುವುದು;

(ಯು) ಕೆಲಸದ ಸ್ಥಳದಲ್ಲಿ ಉಂಟಾಗುವ ಅತಿಯಾದ ಶಬ್ದದಿಂದ, ಕಂಪನಗಳಿಂದ ಮತ್ತು ವಾಯುಮಾಲಿನ್ಯದಿಂದ ಆಗುವ ಹಾನಿಕಾರಕ ಪರಿಣಾಮಗಳಿಂದ ಹಡಗು ಕಟ್ಟೆ ಕೆಲಸಗಾರರನ್ನು ರಕ್ಷಿಸಲು ತೆಗೆದುಕೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳಿಗೆ ಉಪಬಂಧ ಕಲ್ಪಿಸುವುದು;

(ವಿ) ರಕ್ಷಣಾ ಸಾಧನ ಸಾಮಗ್ರಿಯನ್ನು ಅಥವಾ ರಕ್ಷಣಾ ಉಡುಪುಗಳನ್ನು ಒದಗಿಸಲು ಉಪಬಂಧ ಕಲ್ಪಿಸುವುದು;

(ಡಬ್ಲ್ಯು) ನೈರ್ಮಲ್ಯಕ್ಕೆ, ತೊಳೆಯುವುದಕ್ಕೆ ಮತ್ತು ಕಲ್ಯಾಣ ಸೌಕರ್ಯಗಳಿಗೆ ಉಪಬಂಧ ಕಲ್ಪಿಸುವುದು;

(ಎಕ್ಸ್) ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸುವುದು, ಎಂದರೆ,-

(i) ವೈದ್ಯಕೀಯ ಮೇಲ್ವಿಚಾರಣೆ;

(ii) ಅಂಬ್ಯುಲೆನ್ಸ್ ಕೊಠಡಿಗಳು, ಪ್ರಥಮ ಚಿಕಿತ್ಸೆ ಮತ್ತು ರಕ್ಷಣಾ ಸೌಲಭ್ಯಗಳು ಮತ್ತು ಚಿಕಿತ್ಸೆಗಾಗಿ ಹತ್ತಿರದ ಸ್ಥಳಕ್ಕೆ ಹಡಗು ಕಟ್ಟೆ ಕೆಲಸಗಾರರನ್ನು ಕೊಂಡೊಯ್ಯಲು ಏರ್ಪಾಟುಗಳು;

(iii) ಸುರಕ್ಷತೆ ಮತ್ತು ಆರೋಗ್ಯ ಸಂಘಟನೆ; ಮತ್ತು

(iv) ಹಡಗು ಕಟ್ಟೆ ಕೆಲಸಗಾರರಿಗೆ ತರಬೇತಿ ಮತ್ತು ಅವರ ಬಾಧ್ಯತೆಗಳು, ಕೆಲಸದ ಸ್ಥಳದಲ್ಲಿ ಅವರ ಸುರಕ್ಷತೆ ಮತ್ತು ಆರೋಗ್ಯಕ್ಕಾಗಿ ಹಡಗು ಕಟ್ಟೆ ಕೆಲಸಗಾರರಿಗೆ ಇರುವ ಸೌಕರ್ಯಗಳು ಮತ್ತು ಹಕ್ಕುಗಳು;

(ವೈ) ವೃತ್ತಿ ಸಂಬಂಧಿ ಅಪಘಾತಗಳ, ಅಪಾಯಕರ ಘಟನೆಗಳ ಮತ್ತು ಕಾಯಿಲೆಗಳ ಬಗ್ಗೆ ತನಿಖೆ ನಡೆಸಲು ಅಂಥ ಕಾಯಿಲೆಗಳನ್ನು ಮತ್ತು ನೋಟೀಸುಗಳ ನಮೂನೆಗಳನ್ನು ಯಾರಿಗೆ ಒದಗಿಸಬೇಕೋ ಆ ವ್ಯಕ್ತಿಗಳನ್ನು ಮತ್ತು ಪ್ರಾಧಿಕಾರಿಗಳನ್ನು, ಅವುಗಳಲ್ಲಿ ಒಳಗೊಂಡಿರಬೇಕಾದ ವಿವರಗಳನ್ನು ಮತ್ತು ಯಾವ ಸಮಯದೊಳಗೆ ಅವುಗಳನ್ನು ಸಲ್ಲಿಸಬೇಕೋ ಆ ಸಮಯವನ್ನು ನಿರ್ದಿಷ್ಟಪಡಿಸಲು, ಉಪಬಂಧ ಕಲ್ಪಿಸುವುದು; ಮತ್ತು

(ಜಡ್) ಅಪಘಾತಗಳ, ವ್ಯರ್ಥವಾದ ಮಾನವ ದಿನಗಳ, ನಿರ್ವಹಿಸಲಾದ ಸರಕುಗಳ ಪರಿಮಾಣದ ಮತ್ತು ಹಡಗು ಕಟ್ಟೆ ಕೆಲಸಗಾರರ ವಿವರಗಳ ವಿವರಣಪಟ್ಟಿಯನ್ನು ಸಲ್ಲಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ವಿನಿಯಮಗಳು,-

(ಎ) ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ವಿನಿಯಮಗಳಿಂದ ವಿನಾಯಿತಿ ನೀಡಬಹುದೋ ಅಂಥ ಸನ್ನಿವೇಶಗಳಿಗೆ ಅಂಥ ವಿನಾಯಿತಿಗಳನ್ನು ಯಾವ ಪ್ರಾಧಿಕಾರಿಗಳು ನೀಡಬಹುದೋ ಅಂಥ ಪ್ರಾಧಿಕಾರಿಗಳನ್ನು ನಿರ್ದಿಷ್ಟಪಡಿಸಿ ಮತ್ತು ಅವರ ಕಾರ್ಯವಿಧಾನವನ್ನು ವಿನಿಯಮಿಸಿ ಉಪಬಂಧ ಕಲ್ಪಿಸಬಹುದು; ಮತ್ತು

(ಬಿ) ಯಾವುದೇ ನಿರ್ದಿಷ್ಟ ಬಂದರಿನ ಅಥವಾ ಬಂದರುಗಳ ವಿಶೇಷ ಅಗತ್ಯತೆಯನ್ನು ಪೂರೈಸಲು ವಿಶೇಷ ಉಪಬಂಧ ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ವಿನಿಯಮವನ್ನು ರಚಿಸುವಾಗ, ಅದನ್ನು ಉಲ್ಲಂಘಿಸಿದರೆ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ, ಮತ್ತು ಅಪರಾಧ ನಿರ್ಣಯವಾದ ತರುವಾಯವೂ ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ ಅಂಥ ಉಲ್ಲಂಘನೆಯು ಮುಂದುವರಿದ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದೆಂದು ಸಮುಚಿತ ಸರ್ಕಾರವು ನಿರ್ದೇಶಿಸಬಹುದು.

**22. ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಸಂಬಂಧಪಟ್ಟ ಸಾಮಾನ್ಯ ಉಪಬಂಧ.–** (1) ನಿಯಮಗಳನ್ನು ಮತ್ತು ವಿನಿಯಮಗಳನ್ನು ರಚಿಸಲು 20ನೇ ಮತ್ತು 21ನೇ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರವು, ನಿಯಮಗಳನ್ನು ಹಾಗೂ ವಿನಿಯಮಗಳನ್ನು ಪೂರ್ವ ಪ್ರಕಟಣೆಯ ತರುವಾಯ ರಚಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

(2) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10) 23ನೇ ಪ್ರಕರಣದ (3)ನೇ ಖಂಡದ ಅನುಸಾರವಾಗಿ ನಿರ್ದಿಷ್ಟಪಡಿಸಬೇಕಾಗಿರುವ ದಿನಾಂಕವು, ರಚಿಸಲು ಪ್ರಸ್ತಾವಿಸಿದ ನಿಯಮಗಳ ಅಥವಾ ವಿನಿಯಮಗಳ ಕರಡನ್ನು ಯಾವ ದಿನಾಂಕದ ತರುವಾಯ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವಾಗಿರತಕ್ಕದ್ದು ಮತ್ತು ಅದು ಪ್ರಸ್ತಾವಿಸಿದ ನಿಯಮಗಳ ಅಥವಾ ವಿನಿಯಮಗಳ ಕರಡನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಿದ ದಿನಾಂಕದಿಂದ ನಲವತ್ತೈದು ದಿನಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯವೆ, ಆ ನಿಯಮವು ಅಥವಾ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.

**23. 1948ರ 9ನೇ ಅಧಿನಿಯಮದ ತಿದ್ದುಪಡಿ.–** ಹಡಗು ಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948ರ (1948ರ 9) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,–

(ಎ) ಖಂಡ (ಜಿ) ಯಲ್ಲಿರುವ "ಮತ್ತು ಕಲ್ಯಾಣ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) ಖಂಡ (ಹೆಚ್) ಅನ್ನು ಬಿಟ್ಟುಬಿಡತಕ್ಕದ್ದು.

**24. ನಿರಸನ.–** ಭಾರತ ಹಡಗು ಕಟ್ಟೆ ಕಾರ್ಮಿಕರ ಅಧಿನಿಯಮ, 1934 (1934ರ 19) ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**25. ಉಳಿಸುವಿಕೆಗಳು.–** ಭಾರತ ಹಡಗು ಕಟ್ಟೆ ಕಾರ್ಮಿಕರ ಅಧಿನಿಯಮ, 1934 (1934ರ 19)ರ 5ನೇ ಪ್ರಕರಣದ ಮೇರೆಗೆ ರಚಿಸಿದ, ಹಾಗೆ ನಿರಸನಗೊಂಡ ಭಾರತ ಹಡಗು ಕಟ್ಟೆ ಕಾರ್ಮಿಕರ ವಿನಿಯಮಗಳು, 1948 ನ್ನು ಮತ್ತು ಹಡಗು ಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948 (1948ರ 9)ರ 4ನೇ ಪ್ರಕರಣದ ಮೇರೆಗೆ ರಚಿಸಿದ ಹಡಗು ಕಟ್ಟೆ ಕೆಲಸಗಾರರ (ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣ) ಯೋಜನೆ, 1961 ನ್ನು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅವುಗಳನ್ನು ವ್ಯತ್ಯಾಸಗೊಳಿಸಿದ ಅಥವಾ ನಿರಸನಗೊಳಿಸಿದ ಹೊರತು ಅವು ಜಾರಿಯಲ್ಲಿರತಕ್ಕದ್ದು.

* * * * *